ಬಗ್ಗೆನಾವು ರಿವ್ಯೂ ಮಾಡುತ್ತೇವೆ and take such corrective steps as far as possible in consultation with the PWD.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಗುಂಡಪ್ಪ ವಕೀಲರ ಕ್ಷೇತ್ರದಲ್ಲಿ 3 ಪೋಸ್ಟ್‌ಗೆ 18 ಮಂದಿ ಇದ್ದಾರೆ, ಆದರೆ ನಮ್ಮಲ್ಲಿ ಒಬ್ಬರೂ ಇಲ್ಲ.

ಶ್ರೀ ಎಂ.ವೈ.ಘೋರ್ಪಡೆ: ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನಲ್ಲಿ ಬಡ್ಡಿ ಹಗರಣ.

17(220)

ಶ್ರೀ ನಾಯಕ್ ಜೆ.ಡಿ.(ಭಟ್ಕಳ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಜಿಲ್ಲಾ ಪಂಚಾಯತ್‌ನ ಅವಧಿಯಲ್ಲಿ ಆದ ಬಡ್ಡಿ ಹಗರಣ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಗರಣದಲ್ಲಿ ಆದ ಒಟ್ಟು ಮೊತ್ತವೆಷ್ಟು;

ಇ) ಹಗರಣದಲ್ಲಿ ಶಾಮೀಲಾದ ಅಧಿಕಾರಿಗಳ ಮೇಲೆ ಯಾವ ರೀತಿ ಕಾನೂನು ಕ್ರಮ ಕೈಗೊಳ್ಳಲಾಗಿದೆ? (ಅಧಿಕಾರಿಗಳ ವಿವರ ಹಾಗೂ ತೆಗೆದುಕೊಂಡ ಕ್ರಮವನ್ನು ಒದಗಿಸುವುದು);

ಈ) ಹಗರಣದಲ್ಲಿ ಶಾಮೀಲಾಗಿದ್ದ ಎಲ್ಲಾ ಅಧಿಕಾರಿಗಳು ಈಗಲೂ ಸರ್ಕಾರದ ಸೇವೆಯಲ್ಲಿ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಬಂದಿದೆ.

ಆ) ಮಹಾಲೇಖಪಾಲರು ಈ ಲೆಕ್ಕಪತ್ರದ ಬಗ್ಗೆ ವಿಶೇಷ ತನಿಖೆಯನ್ನು ನಡೆಸುತ್ತಿದ್ದು ಅವರಿಂದ ಅಂತಿಮ ವರದಿಯು ಬಂದ ನಂತರ ಖಚಿತವಾದ ಮೊತ್ತವೆಷ್ಟು ಎಂಬುದು ತಿಳಿದುಬರುತ್ತದೆ.

ಇ) ಈ ಹಗರಣದಲ್ಲಿ ಈ ಕೆಳಕಂಡ ಅಧಿಕಾರಿಗಳು ಹಾಗೂ ನೌಕರರು ಶಾಮೀಲಾಗಿರುತ್ತಾರೆ:

i) ಶ್ರೀಮತಿ ಎಂ.ಜಿ. ಶಾಂತಕುಮಾರಿ, ಮುಖ್ಯ ಲೆಕ್ಕಾಧಿಕಾರಿ.

ii) ಶ್ರೀ ಕೆ.ಎನ್. ಚಂದ್ರಶೇಖರ್, ಲೆಕ್ಕಾಧಿಕಾರಿ.

iii) ಶ್ರೀ ದಿನೇಶ್ ಎಂ.ಕಲ್ಲುಕರ್, ದ್ವಿತೀಯ ದರ್ಜೆ ಸಹಾಯಕ.

iv) ಶ್ರೀ ಎಂ.ವಿ.ಹೆಬ್ಬಾರ್, ಪ್ರಥಮ ದರ್ಜೆ ಸಹಾಯಕ.

v) ಶ್ರೀಮತಿ ಹೆಚ್. ಸುಜಾತ ಬಾಯಿ, ಪ್ರಥಮ ದರ್ಜೆ ಸಹಾಯಕಿ

ಈ ಮೇಲಿನ ಎಲ್ಲಾ ಅಧಿಕಾರಿ ಹಾಗೂ ನೌಕರುಗಳನ್ನು ಡಿಸೆಂಬರ್ 1999ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ.

ಅಲ್ಲದೆ ಪೂರ್ಣಪ್ರಕರಣವನ್ನು ಹಾಗೂ ವಿಶೇಷವಾಗಿ ಅಪರಾಧಿಗಳೆಂದು ಪರಿಗಣಿಸಿರುವ ಶ್ರೀಮತಿ ಎಂ.ಜಿ.ಶಾಂತಕುಮಾರಿ ಮತ್ತು ರತ್ನಾಕರ್, ಹಿರಿಯ ಮ್ಯಾನೇಜರ್, ಕಾರ್ಪೊರೇಷನ್ ಬ್ಯಾಂಕ್, ಕಾರವಾರ, ಇವರ ಬಗ್ಗೆ ಪ್ರಕರಣಗಳನ್ನು ಕೇಂದ್ರ ತನಿಖಾ ವಿಭಾಗದವರಿಗೆ (ಸಿ.ಬಿ.ಐ.) ತನಿಖೆಗಾಗಿ ಆಗಸ್ಟ್ 2000ರಲ್ಲಿ ವಹಿಸಲಾಗಿದೆ.

ಮುಖ್ಯ ಲೆಕ್ಕಾಧಿಕಾರಿ ಹಾಗೂ ಲೆಕ್ಕಾಧಿಕಾರಿಯ ಬಗ್ಗೆ ಪ್ರತ್ಯೇಕ ಇಲಾಖಾ ವಿಚಾರಣೆಯನ್ನು ಆರ್ಥಿಕ ಇಲಾಖೆಯು ಪ್ರಾರಂಭಿಸಿದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಉತ್ತರ ಕನ್ನಡ ಅವರು ಗ್ರೂಪ್-ಸಿ ನೌಕರರ ಬಗ್ಗೆ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿದ್ದಾರೆ.

ಈ) ಮೇಲೆ ಹೇಳಿದ ನೌಕರರುಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಾರವಾರ, ಅವರು ಮೂವರು ಗ್ರೂಪ್-ಸಿ ನೌಕರರ ಅಮಾನತ್ತನ್ನು ರದ್ದುಗೊಳಿಸಿ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಪುನಃ ಕೆಲಸಕ್ಕೆ ತೆಗೆದುಕೊಂಡು ಕಾರವಾರದಿಂದ ಹೊರಗೆ ನೇಮಿಸಿರುತ್ತಾರೆ. ಮುಖ್ಯ ಲೆಕ್ಕಾಧಿಕಾರಿ. ಹಾಗೂ ಲೆಕ್ಕಾಧಿಕಾರಿ ಇವರುಗಳನ್ನು ಅಮಾನತ್ತಿನಲ್ಲಿಯೇ ಮುಂದುವರೆಸಲಾಗಿದೆ.

ಶ್ರೀ ಜೆ.ಡಿ.ನಾಯಕ್: ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಜಿಲ್ಲಾ ಪಂಚಾಯತ್‌ನ ಅವಧಿಯಲ್ಲಿ ಬಡ್ಡಿ ಹಗರಣದಲ್ಲಿ ಆದ ಒಟ್ಟು ಮೊತ್ತವೆಷ್ಟು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಹಗರಣದಲ್ಲಿ ಶಾಮೀಲಾದ

ಅಧಿಕಾರಿಗಳ ಮೇಲೆ ಯಾವ್ಯಾವ ರೀತಿ ಕಾನೂನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೆ. ಅದಕ್ಕೆ ಸರ್ಕಾರದಿಂದ ಏನು ಉತ್ತರವನ್ನು ಕೊಟ್ಟಿದ್ದಾರೆ ಅದು ಸಮರ್ಪಕವಾಗಿಲ್ಲ. ಈ ಹಗರಣವಾಗಿ ಮೂರು ವರ್ಷಗಳಾಗಿದೆ, ಆದರೂ ದುರುಪಯೋಗವಾಗಿರುವ ಮೊತ್ತದ ಬಗ್ಗೆ ನಿಖರವಾದ ಮಾಹಿತಿ ಇಲ್ಲವೆಂದು ತಿಳಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಸಹ ಅವರ ಅಮಾನತ್ತು ರಿವೋಕ್ ಮಾಡಲಾಗಿದ್ದು ಅವರುಗಳು ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಸರ್ಕಾರವು ಗ್ರಾಮೀಣ ರಸ್ತೆ ಮತ್ತು ಅಭಿವೃದ್ಧಿ ಕೆಲಸಕ್ಕೇನು ಜಿಲ್ಲಾ ಪರಿಷತ್‌ಗೆ ಹಣವನ್ನು ಕೊಟ್ಟಿತ್ತು ಅದನ್ನು ಅಧಿಕಾರಿಗಳು ದುರುಪಯೋಗ ಮಾಡಿಕೊಂಡಿದ್ದಾರೆ. ಇದರಿಂದ ನಮ್ಮ ಗ್ರಾಮೀಣ ಅಭಿವೃದ್ಧಿಗೆ ತೊಂದರೆಯಾಗಿದೆ. ಇದರ ಬಗ್ಗೆ ಪತ್ರಿಕೆಗಳವರು ವರದಿ ಮಾಡಿದ್ದು ಸುಮಾರು ಆರು ಕೋಟಿರೂಪಾಯಿಗಳು ದುರುಪಯೋಗವಾಗಿದೆ ಎಂದು ತಿಳಿಸಿರುತ್ತಾರೆ. ಹೋದ ತಿಂಗಳು ನಮ್ಮ ಜಿಲ್ಲೆಗೆ ಪಂಚಾಯತ್‌ರಾಜ್ ಸಚಿವರು ಬಂದಿದ್ದಾಗ ಸಂಬಂದಪಟ್ಟ ಅಧಿಕಾರಿಗಳ ಮೇಲೆ ಹದಿನೈದು ದಿವಸಗಳೊಳಗಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಭರವಸೆ ನೀಡಿದ್ದರು. ಆದರೆ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇಲ್ಲಿ ಕೇವಲ ಕಾನೂನಿನ ಕ್ರಮ ತೆಗೆದುಕೊಂಡರೆ ಸಾಕಾಗುವುದಿಲ್ಲ. ಸಂಬಂಧಪಟ್ಟವರಿಂದ ದುರುಪಯೋಗವಾಗಿರುವ ಹಣವನ್ನು ವಸೂಲಿ ಮಾಡಲು ಸಹ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಇದು 1995ರಲ್ಲಿ ಆಗಿರತಕ್ಕದ್ದು 1996 ರಿಂದ 1998. ಈ ಮೂರು ವರ್ಷಗಳಲ್ಲಿ ಬ್ಯಾಂಕ್‌ನಿಂದ ಏನು ಅಕ್ರಮವಾಗಿ ಹಣವನ್ನು ವಿತ್‌ಡ್ರಾ ಮಾಡಿದ್ದಾರೆ ಅದು ಸುಮಾರು 60 ಲಕ್ಷವೆಂದು ನಮಗೆ ತಿಳಿದುಬಂದಿದೆ. ಇದರ ಬಗ್ಗೆ ಹಣಕಾಸು ಇಲಾಖೆಯ ಕಾರ್ಯದರ್ಶಿಯವರು ಪ್ರಾಥಮಿಕ ವಿಚಾರಣೆಯನ್ನು ಮಾಡಿದ್ದಾರೆ. ಮುಖ್ಯ ಲೆಕ್ಕಾಧಿಕಾರಿಗಳು, ಲೆಕ್ಕಾಧಿಕಾರಿಗಳು, ಇಬ್ಬರು ಕಿರಿಯ ಸಹಾಯಕರು, ಒಬ್ಬರು ಹಿರಿಯ ಸಹಾಯಕರು, ಒಟ್ಟು ಐದು ಜನರನ್ನು 1999ರ ಡಿಸೆಂಬರ್‌ನಲ್ಲಿ ಅಮಾನತ್ತು ಮಾಡಲಾಗಿದೆ, ಅವರ ಮೇಲೆ ಡಿಸಿಪ್ಲಿನರಿ ಆ್ಯಕ್ಷನ್ ಸಹ ತೆಗೆದುಕೊಳ್ಳಲಾಗಿದೆ. ವಿಶೇಷವಾದ ಆಡಿಟ್ ಸಹ ಮಾಡುತ್ತಿದ್ದೇವೆ. ಇದರ ಬಗ್ಗೆ ಎ.ಜಿ.ರವರಿಂದ ಇನ್ನೂ ವರದಿ ಬರಬೇಕಾಗಿದೆ. ಅದು ಇನ್ನೂ ಬಂದಿಲ್ಲ. ಇದರ ಬಗ್ಗೆ ವಿಚಾರಣೆಗೋಸ್ಕರ ಆಗಸ್ಟ್‌ನಲ್ಲಿ ಸಿ.ಬಿ.ಐ.ಗೆ ರೆಫರ್ ಮಾಡಿದ್ದೇವೆ. ಗ್ರೂಪ್ 'ಸಿ' ನೌಕರರೇನಿದ್ದಾರೆ ಅವರನ್ನು ಆರು ತಿಂಗಳ ನಂತರ ಪುನರ್ನೇಮಕ ಮಾಡಿಕೊಂಡಿದ್ದೇವೆ. ವಿಚಾರಣೆ ಆರು ತಿಂಗಳಿನಲ್ಲಿ ಮುಗಿಯದಿದ್ದರಿಂದ ಸುಮ್ಮನೆ ಏಕೆ ಸಂಬಳವನ್ನು ಕೊಟ್ಟುಕೊಂಡು ಹೋಗಬೇಕೆಂದು ಹಾಗೆ ಮಾಡಿದ್ದೇವೆ. ಸಿ.ಎ.ಒ.

ಮತ್ತು ಎ.ಒ. ರವರುಗಳು ಇನ್ನೂ ಅಮಾನತ್ತಿನಲ್ಲೇ ಇದ್ದಾರೆ. ಈ ವಿಚಾರ ನಮ್ಮ ಗಮನಕ್ಕೆ ಬಂದಮೇಲೆ ನಾವು 'ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ: ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿಯಲ್ಲಿ ಇದೊಂದು ದೊಡ್ಡ ಹಗರಣವಾಗಿದೆ. 1998ರಲ್ಲಿ ಆಗಿರುವ ಹಗರಣದ ಬಗ್ಗೆ ಆರ್ಥಿಕ ಇಲಾಖೆಯಿಂದ ತನಿಖೆಯನ್ನು ಈಗ ಪ್ರಾರಂಭ ಮಾಡಿದ್ದಾರೆಂದು ಹೇಳುವುದಾದರೆ ಅದು ಮುಗಿಯುವುದು ಯಾವಾಗ? ತಮಗೆ ಯಾವುದಾದರೂ ಒತ್ತಡ ಬಂದು ತನಿಖೆಯನ್ನು ಮುಂದುವರೆಸಲು ಸರ್ಕಾರಕ್ಕೆ ತೊಂದರೆಗಳೇನಾದರೂ ಆಗುತ್ತಿದೆಯೇ? ಆ ಅಧಿಕಾರಿಗಳನ್ನು ಮರುನೇಮಕ ಮಾಡಿದ್ದಾರೆ. ಸ್ಥಳೀಯ ಜಿಲ್ಲಾ ಪಂಚಾಯಿತಿಯಲ್ಲಿ ಅವರು ಇಲ್ಲ, ಬೇರೆ ಕಡೆ ಕೆಲಸ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಹೀಗೆ ಮಾಡುವುದರಿಂದ ಅವರು ಭ್ರಷ್ಟಾಚಾರ ಮಾಡುವುದನ್ನು ಮತ್ತೆ ಮಾಡಲೂಬಹುದು, ತನಿಖೆಯ ಹೆಸರಿನಲ್ಲಿ ತನಿಖೆ ನಡೆಯುತ್ತಿರುತ್ತದೆ, ಮರುನೇಮಕ ಮಾಡಿ ಅವರು ಕೆಲಸ ಮಾಡುತ್ತಿರುತ್ತಾರೆಂದರೆ ಜನರಲ್ಲಿ ಸರ್ಕಾರ ವಿಶ್ವಾಸ ಗಳಿಸಿಕೊಳ್ಳಲು ತಯಾರಿಲ್ಲದಂತಾಗುತ್ತದೆ. ಇಂಥವರ ಮೇಲೆ ಶಿಸ್ತಿನ ಕ್ರಮವೇನು ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಂ.ವೈ.ಘೋರ್ಪಡೆ: 1999ರಲ್ಲಿ ಇದು ನಮ್ಮ ಗಮನಕ್ಕೆ ಬಂದಮೇಲೆ ಐದು ಜನರಿಗೆ ಅಮಾನತ್ತು ಮಾಡಿದ್ದೇವೆ. ಆಗಸ್ಟ್ 2000ರಲ್ಲಿ ಇದನ್ನು ವಿಚಾರಣೆಗಾಗಿ ಸಿ.ಐ.ಡಿ.ಗೆ ರೆಫರ್ ಮಾಡಿದ್ದೇವೆ. ಇದು 1995-1998ರಲ್ಲಿ ಆಗಿರುವುದು ಇದುವರೆಗೂ ತನಿಖೆ ಏಕೆ ಆಗಲಿಲ್ಲವೆಂದು ನನಗೆ ಕೇಳಿದರೆ ಏನು ಉಪಯೋಗ? ಇದು ನಮ್ಮ ಗಮನಕ್ಕೆ ಬಂದಮೇಲೆ ನಾವು ಅಗತ್ಯ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:ತಮ್ಮ ಗಮನಕ್ಕೆ ಬಂದ ಮೇಲೂ ಅನೇಕ ಒತ್ತಡಗಳಿಂದ ತನಿಖೆ ವಿಳಂಬವಾಗುತ್ತಿದೆಯೆಂದು ಜನರು ಮಾತನಾಡುತ್ತಿದ್ದಾರೆ.

ಶ್ರೀ ಎಂ.ವೈ.ಘೋರ್ಪಡೆ: ಆ ರೀತಿ ಒತ್ತಡಗಳೇನೂ ಇಲ್ಲ.

ಶ್ರೀ ಹೆಚ್.ಸಿ.ಬಸವರಾಜ್:ಮಾನ್ಯ ಅಧ್ಯಕ್ಷರೆ, ಅಧಿಕಾರ ವಿಕೇಂದ್ರೀಕರಣದ ಉದ್ದೇಶಕ್ಕೆ ಇದು ವಿರುದ್ಧವಾಗಿದೆ. 1995ರಲ್ಲಿ ಆದಂಥ ಹಗರಣದ ಬಗ್ಗೆ 1999ರಲ್ಲಿ ತನಿಖೆಗೆ ಆದೇಶ ಮಾಡಿ ಅವರನ್ನು ಅಮಾನತ್ತಿನಲ್ಲಿ ಇಟ್ಟು, 1995ರಲ್ಲಾದ ಇದು 1999ರವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೇ ಎಂಬುದು ಒಂದು ಪ್ರಶ್ನೆ. 1999ರಲ್ಲಿ ತನಿಖೆ ಆರಂಭ ಮಾಡಿದ್ದರೂ ಇದುವರೆಗೆ ಎಷ್ಟು ಮೊತ್ತದ ಹಗರಣವಾಗಿದೆ ಎಂಬುದು ತಿಳಿದಿಲ್ಲವೆ?

ಅಧ್ಯಕ್ಷರು: ಸಪ್ಲಿಮೆಂಟರಿಯಲ್ಲಿ ಒಂದು ಪ್ರಶ್ನೆ ಮಾತ್ರ ಕೇಳಿ.

11.30 ಎ.ಎಂ

ಶ್ರೀ ಹೆಚ್.ಸಿ.ಬಸವರಾಜ್: ಈ ಹಗರಣ ಒಳಗೊಂಡಿರುವ ಒಟ್ಟು ಮೊತ್ತ ಎಷ್ಟು? ಸರ್ಕಾರ ಈಗಾಗಲೇ ಇಲಾಖಾ ತನಿಖೆಯನ್ನು ನಡೆಸುತ್ತಿದೆ. ಈ ಹಂತದಲ್ಲಿ ತಾವು ಇಲಾಖಾ ತನಿಖೆ ಮುಗಿಯದೇ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಹೇಗೆ ವಹಿಸಿಕೊಟ್ಟಿರಿ?

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದಂತೆ ಇದು 1998ರಲ್ಲಿ ನಡೆದಿರತಕ್ಕಂಥ ಪ್ರಕರಣ. ಇದರಲ್ಲಿ 60 ಲಕ್ಷ ರೂಪಾಯಿಗಳ ಹಣ ಮಿಸ್ ಅಪ್ರೋಪ್ರಿಯೇಟ್ ಆಗಿದೆ. ಇದು ನಮ್ಮ ಗಮನಕ್ಕೆ ಬಂದ ತಕ್ಷಣ ನಾವು ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡ್ದಿದೇವೆ. ಡಿಸೆಂಬರ್ ತಿಂಗಳಿನಲ್ಲಿ ಆರ್ಥಿಕ ಇಲಾಖೆ ಕಡೆಯಿಂದ ಇದರ ಬಗ್ಗೆ ವರದಿಯೊಂದನ್ನು ತರಿಸಿಕೊಂಡು ನಾವು ಈಗಾಗಲೇ ಐದು ಜನರನ್ನು ಸಸ್ಪೆಂಡ್ ಮಾಡಿದ್ದೇವೆ. ಆಗಸ್ಟ್ 2000ರಲ್ಲಿ ತನಿಖೆಗಾಗಿ ನಾವು ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಿದ್ದೇವೆ. ಇದಕ್ಕಿಂತ ನಾವು ಇನ್ನೇನು ಮಾಡಲಿಕ್ಕಾಗುತ್ತದೆ? ಆ ಕಾಲಕ್ಕೆ ಏಕೆ ಮಾಡಲಿಲ್ಲ ಎಂದು ನಾನು ಹೇಗೆ ಹೇಳುವುದು? ಆ ಕಾಲಕ್ಕೆ ಯಾರಿದ್ದರೋ ಅವರನ್ನೇ ಆ ಬಗ್ಗೆ ಕೇಳಬೇಕಾಗುತ್ತದೆ. ಆ ಬಗ್ಗೆ ನನಗೆ ಉತ್ತರ ಕೊಡಲಿಕ್ಕೆ ಕಷ್ಟವಾಗುತ್ತದೆ.

ರಾಜ್ಯದಲ್ಲಿ ಸರ್ಕಾರಿ ಶಾಲೆಗಳಿಗೆ ಗಣಕ ಯಂತ್ರ.

18(62)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ(ಚಾಮರಾಜ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಪ್ರಾಥಮಿಕ:ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಒದಗಿಸಲಾಗುವುದೆಂದು ತಿಳಿಸಿದ್ದು, ಮೈಸೂರು ನಗರದ ಯಾವ ಯಾವ ಸರ್ಕಾರಿ ಪ್ರಾಥಮಿಕ: ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಒದಗಿಸಲಾಗುವುದು?

ಆ) ಕಂಪ್ಯೂಟರ್ ಒದಗಿಸಿದ ಶಾಲೆಗಳಲ್ಲಿ ಕಂಪ್ಯೂಟರ್ ತರಬೇತಿ ನೀಡಲು ಕಂಪ್ಯೂಟರ್ ತಜ್ಞರು ನೇಮಿಸಲಾಗಿದೆಯೇ: